Business Standard -12.08.2021

# Karnataka Bank Ltd.

Your Family Bank. Across India.

(Regd. & Head Office, Mahaveera Circle, Kankanady, Mangaluru - 575 002)
E-mail : investor.grievance@ktkbank.com, website : www.karnatakabank.com
Phone No.: 0824-2228222, CIN : L85110KA1924PLC001128

## NOTICE OF ANNUAL GENERAL MEETING AND E-VOTING

Notice is hereby given that the 97th Annual General Meeting (e-AGM) of the Bank is scheduled to be held on **Thursday, September 02, 2021 at 11.00 AM IST** through Video Conferencing(VC)/Other Audio Visual means (OAVM) to transact the items of business set out in the Notice of the 97th e-AGM, in compliance with the applicable provisions of the Companies Act, 2013 and the Rules made thereunder and the SEBI (Listing Obligations and Disclosure Requirements) Regulations, 2015, read with General Circular No. 02/2021 dated 13.01.2021 and other relevant General Circulars issued by the Ministry of Corporate Affairs (MCA) and SEBI in the matter.

Accordingly, the Members can attend and participate in the e-AGM through VC/OAVM facility for which necessary instructions are provided in the Notice of e-AGM. The members participating through VC/OAVM facility shall only be reckoned for the purpose of quorum under Section 103 of the Companies Act, 2013.

In compliance with the aforesaid circulars, the Notice of the e-AGM and the Annual Report containing Standalone and Consolidated Financial Statements as on/for the year ended March 31, 2021 along with the report of the Auditors' and the Directors' thereon and other documents required to be attached thereto has been hosted on our Bank's website and the weblink has been disseminated through email on August 10, 2021 to the Members of the Bank whose email addresses are registered with the Bank/Depository Participants.

The Notice & the Annual Report can also be accessed from the Bank's website at https://karnatakabank.com/investor-portal/annual-report and on the website of Stock Exchanges i.e., BSE Limited and National Stock Exchange of India Limited at www.bseindia.com and www.nseindia.com, respectively as well as on www.evotingindia.com.

The items of business set out in the Notice of e-AGM will be transacted through voting by electronic means and accordingly, the Bank is providing its members remote e-voting facility in compliance with the Section 108 the Companies Act, 2013 read with Rule 20 of the aforesaid Rules and Regulation 44 of SEBI (LODR). The remote e-voting schedule is as under :

| | | |
|---|---|---|
| 1. | Date and time of commencement of remote e-voting | **August 27, 2021(9.00 a.m. IST)** |
| 2. | Date and time of end of remote e-voting | **September 01, 2021(5.00 p.m. IST)** |
| 3. | Details of website | **www.evotingindia.com / https://eservices.nsdl.com** |
| 4. | Cut-Off Date fixed by the Bank (i.e. the date of determination of eligibility to vote by electronic means or in the e-AGM) | **August 20, 2021** |

Further,

1. A person whose name is recorded in the register of members in case of shares held in physical form or in the register of beneficial owners maintained by the depositories in case of shares held in dematerialized (demat) form as on Cut-off date (i.e., August 20, 2021) only shall be entitled to vote by electronic means or in the e-AGM.
2. The remote e-voting is open for all the members whether holding shares in physical form or dematerialized form.
3. The remote e-voting shall be **disabled at 5.00 PM IST on September 01, 2021** and shall not be allowed beyond this date and time.
4. Further, the facility for voting through electronic voting system will also be made available at the e-AGM. The members attending the e-AGM and who have not cast their vote(s) through remote e-voting will be allowed to vote at the e-AGM.
5. Even after exercising his/her right to vote through remote e-voting, a member may participate in the e-AGM but shall not vote again at the e-AGM.
6. Any person, who acquires shares of the Bank and becomes a member after dissemination of the Notice and holding shares as on the cut-off date i.e., **August 20, 2021,** may write to Bank's Registrar and Share Transfer Agent (R&TA) at irg@integratedindia.in in case of any login related issues. However, users who have already registered with CDSL/NSDL for remote e-voting can use their existing user ID and password for casting the vote and also for attending the e-AGM electronically.
7. Detailed instructions on the procedure to be followed for remote e-voting, participating in the e-AGM and for voting during the e-AGM have been provided in the Notice of e-AGM for the information and guidance of the members.
8. In case of any queries regarding remote e-voting you may refer to the 'user manual for members' available at www.evotingindia.com under Help menu. The members may contact the following for any grievances in the matter :

   a) NSDL — Phone No.: 1800-1020-990, E-mail : evoting@nsdl.co.in

   or

   b) CDSL — Phone No.: 1800-200-5533, E-mail : helpdesk.evoting@cdslindia.com

   or

   c) Secretarial Department of the Bank — Mr. Prasanna Patil (Company Secretary)
   Phone No.: 0824-2228183/184, E-mail : investor.grievance@ktkbank.com

   or

   d) Registrar and Share Transfer Agent — Phone No.: 080-23460815, E-mail : irg@integratedindia.in

9. **TDS on Dividend :** The Board of Directors has recommended a dividend of ` 1.80 per share for the FY 2020-21, subject to approval of the members at the ensuing e-AGM and the Record Date for the purpose is fixed as **August 20, 2021.** As per the provisions of Income Tax Act , 1961 amended by Finance Act 2020, the Bank is required to deduct tax at source (TDS) from the dividend paid to the shareholders at the prescribed rates. Detailed instructions in this connection are provided in the Notice of AGM and the same may also be viewed at https://karnatakabank.com/investor-portal/annual-report. The shareholders claiming exemption from TDS/deduction at lower rates etc., in eligible cases are required to upload the necessary documents/declaration etc., on the weblink https://www.integratedindia.in/ExemptionForm Submission.aspx on or before **August 25, 2021.** No communication on the tax determination/deduction received through any other mode or after the aforesaid date and time will be considered for payment of Dividend.
10. **Procedure for updation of email id and mobile numbers :**

| | | |
|---|---|---|
| **a.** | **For the shares held in physical form** | The details shall be registered with Bank's RTA- Integrated Registry Management Services Pvt. Ltd. at irg@integratedindia.in by quoting Folio number mentioning the subject line as : "97th AGM – Need login id".<br>Please note that the Bank/RTA reserve the right to verify the authenticity of the persons who request for login credentials. |
| **b.** | **For the shares held in electronic form (i.e.** | The details shall be updated with the concerned DP where the Demat account is maintained. |

For Karnataka Bank Ltd.
**Prasanna Patil**
Company Secretary

Place : Mangaluru
Date : August 11, 2021

Udayavani -12.08.2021

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

(ನೋಂದಾಯಿತ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)
ಇ-ಮೇಲ್ : investor.grievance@ktkbank.com, ಕಂಪನಿ ಜಾಲತಾಣ : www.karnatakabank.com
ಫೋನ್ ನಂ. : 08242228222, ಕಂಪನಿ ಗುರುತು ಸಂಖ್ಯೆ : L85110KA1924PLC001128

## ಬ್ಯಾಂಕಿನ ವಾರ್ಷಿಕ ಮಹಾಸಭೆ ಮತ್ತು ವಿದ್ಯುನ್ಮಾನ ಮತದಾನ ಸಂಬಂಧಿತ ಸೂಚನೆ

ಕರ್ಣಾಟಕ ಬ್ಯಾಂಕಿನ ಎಲ್ಲಾ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕಂಪನಿ ಕಾಯಿದೆ, 2013, ಸೆಬಿ (LODR) ನಿಯಂತ್ರಣಗಳು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (MCA) ಹೊರಡಿಸಿರುವ ಸುತ್ತೋಲೆ ಸಂಖ್ಯೆ 02/2021 ದಿ. 13.01.2021 ಹಾಗೂ ಈ ವಿಷಯದ ಸಂಬಂಧವಾಗಿ MCA ಹಾಗೂ SEBI ಹೊರಡಿಸಿದ ಈ ಹಿಂದಿನ ಸುತ್ತೋಲೆಗಳಿಗೆ ಅನುಸಾರವಾಗಿ, ಮಹಾಸಭೆಯ ನೋಟೀಸಿನಲ್ಲಿ ಉಲ್ಲೇಖಿಸಲಾಗಿರುವ ಠರಾವುಗಳ ಅನುಮೋದನೆಗಾಗಿ ಬ್ಯಾಂಕಿನ ಸದಸ್ಯರುಗಳ 97ನೇ ವಾರ್ಷಿಕ ಮಹಾಸಭೆಯು **ಸೆಪ್ಟೆಂಬರ್ 2, 2021 ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ** ವಿದ್ಯುನ್ಮಾನ ಮಾಧ್ಯಮ (VC) ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮಗಳ ಮೂಲಕ (OAVM) ಜರುಗಲಿದೆ.

ಈ ಮೇಲೆ ಹೇಳಿರುವಂತೆ, ಬ್ಯಾಂಕಿನ ಸದಸ್ಯರುಗಳು ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮಾಧ್ಯಮ (VC) ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮಗಳ ಮೂಲಕ (OAVM) ಭಾಗವಹಿಸಬಹುದಾಗಿದೆ. ಕಂಪನಿ ಕಾಯ್ದೆ 2013, ಸೆಕ್ಷನ್ 103ರ ಪ್ರಕಾರ ಈ ವಿದ್ಯುನ್ಮಾನದಲ್ಲಿ ಭಾಗವಹಿಸುವ ಸದಸ್ಯರನ್ನು ಮಾತ್ರ ಮಹಾಸಭೆಗೆ ಬೇಕಾಗುವ ಹಾಜರಾತಿಗಾಗಿ ಪರಿಗಣಿಸಲಾಗುವುದು.

ವಿದ್ಯುನ್ಮಾನ ಮಾಧ್ಯಮದ ಮೂಲಕ ನಡೆಯುವ ಈ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವ ಕುರಿತು ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಿರುವ ವಿವರವಾದ ಸೂಚನೆಗಳನ್ನು ಅನುಸರಿಸಬೇಕಾಗಿ ವಿನಂತಿ.

ಈ ಮೇಲೆ ಹೇಳಿರುವ ಸುತ್ತೋಲೆಗಳಿಗೆ ಅನುಸಾರವಾಗಿ ವಾರ್ಷಿಕ ಮಹಾಸಭೆಯ ನೋಟಿಸು ಮತ್ತು 2020-21 ನೇ ಸಾಲಿನ ವಾರ್ಷಿಕ ವರದಿಯನ್ನು ಆಗಸ್ಟ್ 10, 2021ರಂದು ಎಲ್ಲ ಸದಸ್ಯರುಗಳಿಗೆ ಇ-ಮೇಲ್ ಮೂಲಕ (ಲಭ್ಯವಿರುವಲ್ಲಿ) ಕಳುಹಿಸಲಾಗಿದೆ. ಈ ವರದಿ/ದಾಖಲೆಗಳು ಬ್ಯಾಂಕ್‌ನ ಜಾಲತಾಣ https://karnatakabank.com/ investor-portal/annual-report ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ಜಾಲತಾಣಗಳಲ್ಲಿ (ಅಂದರೆ, www.bseindia.com ಮತ್ತು www.nseindia.com) ಹಾಗೂ CDSLನ ಜಾಲತಾಣ www.evotingindia.com ನಲ್ಲೂ ಸಹ ಲಭ್ಯವಿವೆ.

ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ಉಲ್ಲೇಖಿಸಿದ ಠರಾವುಗಳ ಅನುಮೋದನೆಯನ್ನು ವಿದ್ಯುನ್ಮಾನ ಮತದಾನದ ಮುಖಾಂತರ ಪಡೆಯಲಾಗುವುದು. ವಿದ್ಯುನ್ಮಾನ ಮತದಾನ (ರಿಮೋಟ್ ಇ-ಮೋಟಿಂಗ್) ಸೌಲಭ್ಯದ ವಿವರಗಳು ಈ ಕೆಳಗಿನಂತಿವೆ :

| | |
|---|---|
| ವಿದ್ಯುನ್ಮಾನ ಮತದಾನ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ | **ಆಗಸ್ಟ್ 27, 2021 ಬೆಳಗ್ಗೆ 9.00 ಗಂಟೆ (ಭಾರತೀಯ ಕಾಲಮಾನ)** |
| ವಿದ್ಯುನ್ಮಾನ ಮತದಾನ ಮುಕ್ತಾಯವಾಗುವ ದಿನಾಂಕ ಮತ್ತು ಸಮಯ | **ಸೆಪ್ಟೆಂಬರ್ 1, 2021 ಸಂಜೆ 5.00 ಗಂಟೆ (ಭಾರತೀಯ ಕಾಲಮಾನ)** |
| ವಿದ್ಯುನ್ಮಾನ ಮತದಾನ ಲಭ್ಯವಿರುವ ಜಾಲತಾಣ | **www.evotingindia.com / https://eservices.nsdl.com** |
| ನಿಗದಿತ ದಿನಾಂಕ (ವಿದ್ಯುನ್ಮಾನ ಮತದಾನ ಹಾಗೂ ವಾರ್ಷಿಕ ಮಹಾಸಭೆಯಂದು ಮತದಾನ ಮಾಡಲು ಅರ್ಹತೆ ಹೊಂದಿರುವ ಸದಸ್ಯರ ಪಟ್ಟಿಯನ್ನು ನಿರ್ಧರಿಸುವ ದಿನಾಂಕ) | **ಆಗಸ್ಟ್ 20, 2021** |

I ದಿನಾಂಕ **ಆಗಸ್ಟ್ 20, 2021ನ್ನು** ನಿಗದಿತ ದಿನಾಂಕವನ್ನಾಗಿ **(Cut-off Date)** ನಿಗದಿಪಡಿಸಲಾಗಿದ್ದು, ಆ ದಿನಾಂಕದಂದು ಬ್ಯಾಂಕಿನ ಶೇರುಗಳನ್ನು ಭೌತಿಕ ಅಥವಾ ಡಿಮ್ಯಾಟ್ ಸ್ವರೂಪದಲ್ಲಿ ಹೊಂದಿರುವ ಸದಸ್ಯರು ವಿದ್ಯುನ್ಮಾನ ಮತದಾನ ಅಥವಾ ವಾರ್ಷಿಕ ಮಹಾಸಭೆ ಜಾರಿಯಲ್ಲಿರುವ ಸಮಯದಲ್ಲಿ ವಿದ್ಯುನ್ಮಾನ ಮತದಾನ ಮಾಡಲು ಅರ್ಹತೆ ಹೊಂದಿರುತ್ತಾರೆ.

II ಭೌತಿಕ ಅಥವಾ ಡಿಮ್ಯಾಟ್ ಸ್ವರೂಪದಲ್ಲಿ ಷೇರುಗಳನ್ನು ಹೊಂದಿರುವವರು ವಿದ್ಯುನ್ಮಾನ ಮತದಾನದ ಮೂಲಕ ಮತ ಚಲಾಯಿಸಲು ಮುಕ್ತ ಅವಕಾಶವಿರುತ್ತದೆ.

III ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು **ಸೆಪ್ಟೆಂಬರ್ 1, 2021 ಸಂಜೆ 5.00 ಗಂಟೆಗೆ ನಿಷ್ಕ್ರಿಯಗೊಳಿಸಲಾಗುತ್ತದೆ** ಮತ್ತು ಆ ಬಳಿಕ ಈ ಸೌಲಭ್ಯ ಲಭ್ಯವಿರುವುದಿಲ್ಲ.

IV. ವಿದ್ಯುನ್ಮಾನ ಮತದಾನದ ಮೂಲಕ ಮತ ಚಲಾಯಿಸಿರುವ ಸದಸ್ಯರಿಗೆ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶವಿರುತ್ತದಾದರೂ, ಮಹಾಸಭೆಯಲ್ಲಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ.

V. ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ಮತ್ತು ವಿದ್ಯುನ್ಮಾನ ಮತದಾನದ ಮೂಲಕ ಮತ ಚಲಾಯಿಸಿರದ ಸದಸ್ಯರುಗಳಿಗೆ ಮಾತ್ರ ಮಹಾಸಭೆಯು ಜಾರಿಯಲ್ಲಿರುವ ಸಮಯದಲ್ಲಿ ವಿದ್ಯುನ್ಮಾನ ಮತದಾನದ ಅವಕಾಶ ನೀಡಲಾಗುವುದು.

VI. ಮಹಾಸಭೆಯ ನೋಟೀಸ್ ರವಾನಿಸಿದ ನಂತರದಲ್ಲಿ ಬ್ಯಾಂಕಿನ ಷೇರುದಾರರಾಗಿ ನಿಗದಿತ ದಿನಾಂಕದಂದು ಷೇರು ಹೊಂದಿರುವ ಷೇರುದಾರರಿಗೆ ಲಾಗಿನ್ ಸಮಸ್ಯೆ ಎದುರಾದಲ್ಲಿ ಇ-ಮೇಲ್ - irg@integratedindia.in ನ್ನು ಸಂಪರ್ಕಿಸಬಹುದಾಗಿದೆ. CDSL/NSDLನ ವಿದ್ಯುನ್ಮಾನ ಮತದಾನದ ಪೋರ್ಟಲ್ ನಲ್ಲಿ ಈಗಾಗಲೇ ನೋಂದಾಯಿಸಿರುವ ಸದಸ್ಯರು ತಾವು ಹೊಂದಿರುವ Login Id ಮತ್ತು Password ಅನ್ನು ಬಳಸಿ ವಿದ್ಯುನ್ಮಾನ ಮತದಾನ ಹಾಗೂ ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮಾಧ್ಯಮದ ಮೂಲಕ ಭಾಗವಹಿಸಬಹುದಾಗಿದೆ.

VII. ವಿದ್ಯುನ್ಮಾನ ಮತದಾನದ ನಿಯಮಗಳು ಮತ್ತು ಇತರ ವಿವರಗಳನ್ನು ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ಕೊಡಲಾಗಿದೆ.

VIII. ವಿದ್ಯುನ್ಮಾನ ಮತದಾನದ ಬಗೆಗಿನ ಸಂದೇಹಗಳ ಪರಿಹಾರಕ್ಕಾಗಿ www.evotingindia.com ನ Help Menu ನಲ್ಲಿ ಕೈಪಿಡಿ ಲಭ್ಯವಿದೆ. ಯಾವುದೇ ದೂರು ಅಥವಾ ಸಮಸ್ಯೆಗಳಿದ್ದಲ್ಲಿ ಈ ಕೆಳಗಿನ ದೂರವಾಣಿ ಸಂಖ್ಯೆ ಅಥವಾ ಇ-ಮೇಲ್ ಮೂಲಕ ಸಂಪರ್ಕಿಸಬಹುದು:

| | |
|---|---|
| 1 NSDL | Phone No.: 1800-1020-990, E-mail : evoting@nsdl.co.in ಅಥವಾ |
| 2 CDSL | Phone No.: 1800-200-5533, E-mail : helpdesk.evoting@cdslindia.com ಅಥವಾ |
| 3 ಬ್ಯಾಂಕಿನ ಕಂಪನಿ ಕಾರ್ಯದರ್ಶಿ ವಿಭಾಗ | ಶ್ರೀ ಪ್ರಸನ್ನ ಪಾಟೀಲ್ (ಕಂಪನಿ ಕಾರ್ಯದರ್ಶಿ)<br>Phone No.: 0824-2228183/184, E-mail : investor.grievance@ktkbank.com ಅಥವಾ |
| 4 RTA (Integrated Registry Management Services Pvt. Ltd) | Unit : Karnataka Bank Ltd.<br>Phone No.: 080-23460815, E-mail : irg@integratedindia.in |

IX **ಲಾಭಾಂಶದ ಮೇಲೆ ಅನ್ವಯವಾಗುವ ತೆರಿಗೆಯ ಬಗ್ಗೆ :**

ನಿರ್ದೇಶಕರ ಮಂಡಳಿಯು 2020-21ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ರೂ. 1.80ರಂತೆ ಲಾಭಾಂಶವನ್ನು ಶಿಫಾರಸು ಮಾಡಿದ್ದು (ಸದಸ್ಯರ ಅನುಮೋದನೆಗೆ ಒಳಪಟ್ಟು) **20.08.2021**ನ್ನು ರೆಕಾರ್ಡ್ ದಿನಾಂಕವನ್ನಾಗಿ (Record Date) ಘೋಷಿಸಲಾಗಿದೆ. ಆದಾಯ ತೆರಿಗೆ ಕಾಯಿದೆ, 1961ರ ಪ್ರಕಾರ (2020ರ ತಿದ್ದುಪಡಿಯಂತೆ), ಲಾಭಾಂಶದ ಪಾವತಿಯ ಸಂದರ್ಭದಲ್ಲಿ ತೆರಿಗೆಯನ್ನು ನಿಗದಿತ ದರದಲ್ಲಿ ಮೂಲದಲ್ಲಿಯೇ ಕಡಿತ ("TDS") ಗೊಳಿಸುವುದು ಕಡ್ಡಾಯವಾಗಿರುತ್ತದೆ. ಈ ವಿಷಯವಾಗಿ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಜಾಲತಾಣ : https://karnatakabank.com/investor-portal/annual-report ನಲ್ಲಿ ಅಥವಾ ವಾರ್ಷಿಕ ಮಹಾಸಭೆಯ ನೋಟೀಸಿನಲ್ಲಿ ನೀಡಿರುವ ವಿವರಗಳನ್ನು ಷೇರುದಾರರು ಪರಿಶೀಲಿಸಬಹುದು. ಈ ನಿಟ್ಟಿನಲ್ಲಿ, ಸೂಕ್ತವಾದ TDSನ ದರವನ್ನು ನಿಗದಿಪಡಿಸುವ ಸಲುವಾಗಿ ಆದಾಯ ತೆರಿಗೆ ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ ಸಂಬಂಧಿತ ದಾಖಲೆಗಳನ್ನು ನೀಡಲು ಬಯಸುವ ಷೇರುದಾರರು ಬ್ಯಾಂಕಿನ RTA ನ ಜಾಲತಾಣ : https://www.integratedindia.in/ ExemptionFormSubmission.aspx ನಲ್ಲಿ ದಿನಾಂಕ **25.08.2021** ರ ಒಳಗಾಗಿ ಸಲ್ಲಿಸಬೇಕಾಗಿ ಕೋರುತ್ತೇವೆ ಮತ್ತು ಇತರ ಯಾವುದೇ ಇಮೇಲ್/ಭೌತಿಕ ರೂಪದಲ್ಲಿ ಸಲ್ಲಿಸಿದ ದಾಖಲೆಗಳನ್ನು ಮಾನ್ಯ ಮಾಡಲಾಗುವುದಿಲ್ಲ.

X **ಸದಸ್ಯರು ಇ-ಮೇಲ್ ಮತ್ತು ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿಕೊಳ್ಳಲು ಅನುಸರಿಸಬೇಕಾದ ವಿಧಾನ :**

| | |
|---|---|
| **ಭೌತಿಕ ರೂಪದಲ್ಲಿ ಇರುವ ಷೇರುಗಳಿಗಾಗಿ** | ವಿವರಗಳನ್ನು ಬ್ಯಾಂಕಿನ RTA- ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈ. ಲಿಮಿಟೆಡ್ ಅವರಿಗೆ irg@integratedindia.in ಮೂಲಕ ಫೋಲಿಯೊ ಸಂಖ್ಯೆಯನ್ನು ಉಲ್ಲೇಖಿಸಿ ಇ-ಮೇಲ್ ಕಳುಹಿಸತಕ್ಕದ್ದು (ವಿಷಯದ ಅಂಕಣದಲ್ಲಿ "97th AGM-Need login id" ಎಂದು ಬರೆಯತಕ್ಕದ್ದು). ಲಾಗಿನ್ ವಿವರಗಳಿಗೆ ಕೋರಿಕೆ ಸಲ್ಲಿಸಿದವರ ಮಾಹಿತಿಗಳನ್ನು ಪರಿಶೀಲಿಸುವ ಹಕ್ಕನ್ನು ಬ್ಯಾಂಕು/ RTA ಕಾಯ್ದಿರಿಸಿಕೊಂಡಿರುತ್ತದೆ. |
| **ಡಿಮ್ಯಾಟ್ ರೂಪದಲ್ಲಿ ಹೊಂದಿರುವ ಷೇರುಗಳಿಗಾಗಿ** | ಡಿಮ್ಯಾಟ್ ಖಾತೆಯನ್ನು ನಿರ್ವಹಿಸುವ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್ (DP) ಗೆ ನೀಡಿ ವಿವರಗಳನ್ನು ನೋಂದಾಯಿಸಿಕೊಳ್ಳತಕ್ಕದ್ದು. |

ಸ್ಥಳ : ಮಂಗಳೂರು
ದಿನಾಂಕ : ಆಗಸ್ಟ್ 11, 2021

ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಪರವಾಗಿ,
**ಪ್ರಸನ್ನ ಪಾಟೀಲ್**
ಕಂಪನಿ ಕಾರ್ಯದರ್ಶಿ